# ಸಂಜೆ



**ಸೂ**ರ್ಯ ಬಾನಂಚಿಗೆ ಬಂದಿದ್ದಾನೆ.

ಅವನು ಮುಳುಗಲು ಸ್ವಲ್ಪವೇ ಸಮಯ ಉಳಿದಿದೆ. ಅವರು ಹೊರಗೆ ಬಂದು ವರಾಂಡದಲ್ಲಿ ಕುಳಿತರು.

ಅವರೊಬ್ಬ ನಿವೃತ್ತ ಪ್ರಾಧ್ಯಾಪಕರು. ಮನೆಯಲ್ಲಿ ಅವರು ಒಬ್ಬರೇ; ಹೆಂಡತಿ, ಮಕ್ಕಳು ಯಾರೂ ಇಲ್ಲ. ಸಂಜೆ ಹೊರಗೆ ಬಂದು ಕುಳಿತುಕೊಳ್ಳುವುದು ಅವರಿಗೆ ಇಷ್ಟವಾಗುತ್ತದೆ.

ಸಂಜೆ ಹೊತ್ತು ಬಿಸಿಲು ಎಲೆ ಎಲೆಗಳ ಮೇಲೆ, ಮನೆ ಮನೆಗಳ ಮೇಲೆ ಬಂಗಾರವನ್ನು ಸುರಿಯುತ್ತದೆ. ಅದು ಕಿಟಕಿಯ ಗಾಜಿನ ಮೇಲೆ ಬಿದ್ದು ಲಕಲಕಿಸುತ್ತದೆ. ಅದು ಕೋಣೆಯೊಳಗೆ ನುಸುಳಿ ಹೋಗುವುದೂ ಇದೆ. ಹೀಗಾಗಿ ಇದು ಬಂಗಾರದ ಸಮಯ! ಇವೆಲ್ಲವನ್ನೂ ಬಂಗಾರದ ದೃಷ್ಟಿಯಿಂದ ಪರಿಭಾವಿಸುವುದು ಅವರಿಗೆ ಸೇರುತ್ತದೆ. ಅವರಿಗೆ ಸೂರ್ಯ ಮೈದಾಸ ರಾಜನ ಹಾಗೆ ಕಾಣುತ್ತಾನೆ. ಅವನ ಕಿರಣಸ್ಪರ್ಶಕ್ಕೆ ಎಲ್ಲವೂ ಬಂಗಾರವಾಗಿ ಬಿಡುವುದಲ್ಲ!

ಆದರೆ ಅವರಿಗೆ ಗೊತ್ತಿದೆ, ಇದು ಕೇವಲ ಅಲ್ಪಾವಧಿಗೆ ಮಾತ್ರ ನಡೆಯುವಂತಹದು... ಗುಲಾಬಿ ರಂಗು ಹಚ್ಚಿದ ಸೂರ್ಯ ದೂರದ ನೀಲಿ ಸಮುದ್ರದಲ್ಲಿ ಸ್ನಾನಕ್ಕೆ ಇಳಿದ ಬಳಿಕ ಇದ್ದಕ್ಕಿದ್ದಂತೆ ಎಲ್ಲಿಯದೋ ಅದೃಶ್ಯ ಕೈಯೊಂದು ಬಂಗಾರವನ್ನೆಲ್ಲಾ ಅಳಿಸಿ ಬಿಡುತ್ತದೆ. ಎಲೆ, ಹೂಗಳ ಮೇಲೆ ಹರಡಿಕೊಂಡಿರುವ... ಮನೆಗಳ ಮೇಲೆ ಚೆಲ್ಲಿಕೊಂಡಿರುವ, ಕೋಣೆಯ ಒಳಗೆ ನುಸುಳಿಕೊಂಡಿರುವ ಎಲ್ಲವನ್ನೂ! ಸೂರ್ಯ ಸಮುದ್ರದಲ್ಲಿ ರಂಗಪಂಚಮಿ ಆಡುತ್ತಾ ದೂರ ದೂರ ಸಾಗುವನು.

ಹೀಗೆ ಯೋಚಿಸುವುದು ಅವರಿಗೆ ಇಷ್ಟವಾಗುತ್ತದೆ.

ಆದರೆ ಚಾರು ಪಕ್ಕಾ ಪ್ರಾಕ್ಟಿಕಲ್. ಚಾರು! ಅವಳು ಅವರ ನೆರೆಮನೆಯವಳು. ಹಿಂದೆ ವಯಸ್ಸಾದ ತಾಯಿ ಅವಳೊಂದಿಗೆ ಇರುತ್ತಿದ್ದರು. ನಾಲ್ಕು ವರ್ಷಗಳ ಹಿಂದೆ ಅವರು ತೀರಿಕೊಂಡ ಬಳಿಕ ಈಗ ಮನೆಯಲ್ಲಿ ಅವಳು ಒಬ್ಬಳೇ. ಅವಳು ಕೆಲಸಕ್ಕೆ ಹೋಗುತ್ತಾಳೆ. ಮದುವೆ ಮಾಡಿಕೊಂಡಿಲ್ಲ. ಯಾಕೆ ಮದುವೆ ಆಗಿಲ್ಲ ಎನ್ನುವುದಕ್ಕೆ ಅಂತಹ ಮುಖ್ಯ